- 5 -

ಸಿ.ಸಿ. ಸಂಖ್ಯೆ **2796 / 2024**
**ಪಿ.ಡಬ್ಲೂ -01**

**ದಿನಾಂಕಃ 17.07.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ವಾಟೀ ಸವಾಲು ಃ- ಶ್ರೀ ಜಿ ಹೆಚ್ ಎಂ ಆರೋಪಿ ಪರ** ವಕೀಲರಿಂದ **.**

ಎಲ್ಲಿಯಮರೆಗೂ ವಿದ್ಯಾಭ್ಯಾಸ ಮಾಡಿರುತ್ತೀರಿ ಎಂದರೆ ಸಾಕ್ಷಿ 2 ನೇ ತರಗತಿ ವರೆಗೆ ಎಂದು ನುಡಿಯುತ್ತಾರೆ. ಕನ್ನಡ ಮತ್ತು ಇಂಗ್ಲೀಷ್ ಓದಲು ಮತ್ತು ಬರೆಯಲು ಬರುತ್ತದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಕುಟುಂಬದಲ್ಲಿ ಎಷ್ಟು ಜನ ಸದಸ್ಯರು ಇದ್ದಾರೆ ಎಂದರೆ ಸಾಕ್ಷಿ 4 ಜನ ಎಂದು ನುಡಿಯುತ್ತಾರೆ. ನಿಮಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ ಇಬ್ಬರು ಎಂದು ನುಡಿಯುತ್ತಾರೆ. ನಿಮ್ಮ ಮಕ್ಕಳು ಏನು ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ವಿದ್ಯಾಭ್ಯಾಸ ಎಂದು ನುಡಿಯುತ್ತರೆ. ನಿಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಎಷ್ಟು ಖರ್ಚು ಆಗುತ್ತದೆ ಎಂದರೆ ಸಾಕ್ಷಿ ರೂ. 1,50,000/- ಹಾಗೂ ಮಗನಿಗೆ 5-10 ಸಾವಿರ ಎಂದು ನುಡಿಯುತ್ತಾರೆ. ನಿಮ್ಮ ಕುಟುಂಬಕ್ಕೆ ತಿಂಗಳಿಗೆ ಎಷ್ಟು ಖರ್ಚು ಮಾಡುತ್ತೀರಿ ಎಂದರೆ ಸಾಕ್ಷಿ 7-8 ಸಾವಿರ ಎಂದು ನುಡಿಯುತ್ತಾರೆ.

ನಿಮ್ಮ ವಾರ್ಷಿಕ ವರಮಾನ ಎಷ್ಟು ಇದೆ ಎಂದರೆ ಸಾಕ್ಷಿಯು ತಿಂಗಳಿಗೆ ರೂ. 1,25,000/- ರಿಂದ 1,50,000/- ಎಂದು ನುಡಿಯುತ್ತಾರೆ. ಹಾಗಾದರೆ ವರ್ಷಕ್ಕೆ ನಿಮ್ಮ ಪ್ರಕಾರ 12 ಲಕ್ಷ ದಿಂದ 15 ಲಕ್ಷ ವಾರ್ಷಿಕ ವರಮಾನ ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಏನು ಉದ್ಯೋಗ ಮಾಡುತ್ತೀರಿ ಎಂದರೆ ಸಾಕ್ಷಿ ಜೆಸಿಬಿ , ಟ್ರ್ಯಾಕ್ಟರ್ ಹಾಗೂ ವ್ಯವಸಾಯ ಎಂದು ನುಡಿಯುತ್ತಾರೆ. ನಿಮ್ಮ ಎಲ್ಲಾ ವ್ಯವಹಾರವನ್ನು ಬ್ಯಾಂಕ್ ಮುಖಾಂತರ ಮಾಡುತ್ತೀರಾ ಎಂದರೆ ಸಾಕ್ಷಿ ಕೆಲವು ವ್ಯವಹಾರವನ್ನು ಬ್ಯಾಂಕ್ ಮೂಲಕ ಹಾಗೂ ಕೆಲವು ವ್ಯವಹಾರವನ್ನು ನಗಧು ಮೂಲಕ ಮಾಡುತ್ತೇವೆ ಎಂದು ನುಡಿಯುತ್ತಾರೆ.

ನಿಮ್ಮ ಕುಟುಂಬದಲ್ಲಿ ನೀವು ಒಬ್ಬರೇ ಸಂಪಾದನೆ ಮಾಡುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ವ್ಯವಹಾರಕ್ಕೆ ಏನಾದರೂ ಸಾಲ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ಜೆಸಿಬಿಗೆ ಲೋನ್ ಇದೆ ಎಂದು ನುಡಿಯುತ್ತಾರೆ. ನೀವು ತಿಂಗಳಿಗೆ ಒಟ್ಟು ಎಷ್ಟು ಲೋನ್ ಅನ್ನು ಪಾವತಿ ಮಾಡುತ್ತೀರಿ ಎಂದರೆ ಸಾಕ್ಷಿ ರೂ. 50 ಸಾವಿರ ಎಂದು ನುಡಿಯುತ್ತಾರೆ. ನಿಮ್ಮ ಎಲ್ಲಾ ಖರ್ಚುವೆಚ್ಚವನ್ನು ತೆಗೆದು ತಿಂಗಳಿಗೆ ಎಷ್ಟು ಹಣ ಉಳಿಸುತ್ತೀರಿ ಎಂದರೆ ಸಾಕ್ಷಿ ರೂ. 1,25,000 ರಿಂದ ರೂ.1,50,000/- ಎಂದು ನುಡಿಯುತ್ತಾರೆ. ನಿಮ್ಮ ಎಲ್ಲಾ ವ್ಯವಹಾರದ ಹಣ ಖಾತೆ ಮುಖಾಂತರ ಬರುತ್ತದೆಯೆ ಎಂದರೆ ಸಾಕ್ಷಿ ಇಲ್ಲ ಎಲ್ಲಾ ನಗಧು ರೂಪದಲ್ಲೆ ಬರುತ್ತದೆ ಎಂದು ನುಡಿಯುತ್ತಾರೆ.

ನೀವು ಎಷ್ಟು ಬ್ಯಾಂಕುಗಳಲ್ಲಿ ಖಾತೆಯನ್ನು ಹೊಂದಿದ್ದೀರಿ ಎಂದರೆ ಸಾಕ್ಷಿ ಒಂದೇ ಖಾತೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಎಸ್ ಬಿ ಐ ಮತು ಕರ್ನಾಟಕ ಬ್ಯಾಂಕ್ ನಲ್ಲಿ ಖಾತೆ ಇರುತ್ತದೆ ಎಂದು ನುಡಿಯುತ್ತಾರೆ. ನೀವು ಆದಾಯ ತೆರಿಗೆ ಪಾವತಿ ಮಾಡುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪತ್ನಿಯವರ ಹೆಸರಿನಲ್ಲಿ ವ್ಯವಹಾರ ಮಡುತ್ತಿದ್ದೇನೆ ಎಂದು ಹೇಳಿದ್ದು ಆ ಸಂಬಂಧ ಅವರ ಹೆಸರಿನಲ್ಲಿ ತೆರಿಗೆ ಆದಾಯ ಪಾವತಿ ಮಾಡುತ್ತಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತರೆ. ಸುಮಾರು ಎಷ್ಟು ವರ್ಷಗಳಿಂದ ನಿಮ್ಮ ಪತ್ನಿಯವರ ಹೆಸರಿನಲ್ಲಿ ತೆರಿಗೆ ಆದಾಯ ಪಾವತಿ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ 2020 ನೇ ಇಸವಿಯಿಂದ ಎಂದು ನುಡಿಯುತ್ತಾರೆ. ಸದರಿ ತೆರಿಗೆ ಆದಾಯ ಪಾವತಿಯಲ್ಲಿ ನಿಮ್ಮ ಎಲ್ಲಾ ಖರ್ಚುವಚ್ಚ ಮತ್ತು ಆದಾಯವನ್ನು ಸೇರಿಸಿ ತೆರಿಗೆ ಆದಾಯ ಪಾವತಿ ಮಾಡುತ್ತಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಆರೋಪಿಗೆ ರೂ. 15 ಲಕ್ಷ ಹಣವನ್ನು ಪಾವತಿ ಮಾಡಿರುತ್ತೇನೆ ಎಂದು ಹೇಳಿದ್ದು ಆ ಸಂಬಂಧ ಆದಾಯ ತೆರಿಗೆಯಲ್ಲಿ ತೋರಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನಿಮಗೆ ಏನು ಆಗಬೇಕು ಎಂದರೆ ಸಾಕ್ಷಿ

ಅತ್ತಿಗೆಯ ಮಗ ಎಂದು ನುಡಿಯುತ್ತಾರೆ. ಅಂದರೆ ನಿಮ್ಮ ಪತ್ನಿ ಮತ್ತು ಆರೋಪಿಯ ತಾಯಿ ಸ್ವಂತ ಅಕ್ಕ ತಂಗಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಯು ಏನು ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಡ್ರೈವರ್ ಎಂದು ನುಡಿಯುತ್ತಾರೆ. ಆರೋಪಿಯು ಬೇರೆಯವರ ಬಳಿ ಕೂಲಿಗಾಗಿ ಡ್ರೈವರ್ ಕೆಲಸಕ್ಕೆ ಹೋಗುತ್ತಾರೆ ಎಂದರೆ ಸಾಕ್ಷಿ ಸ್ವಂತ ಗಾಡಿ ಇದೆ ಎಂದು ನುಡಿಯುತ್ತಾರೆ. ಯಾವ ವಾಹನ ಮತ್ತು ಅದರ ನಂಬರ್ ಗೊತ್ತಿರುತ್ತದೆಯೆ ಎಂದರೆ ಸಾಕ್ಷಿ ನನ್ನ ಪ್ರಕಾರ ಕ್ಯಾಂಟರ್ ಇದ್ದು ಆದರೆ ವಾಹನದ ನಂಬರ್ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಹೇಳುವಂತೆ ಆರೋಪಿ ಬಳಿ ಯಾವುದೇ ಕ್ಯಾಂಟರ್ ವಾಹನ ಇರುವುದಿಲ್ಲ ಅವರು ಬೇರೆಯವರ ಬಳಿ ಕೂಲಿ ಡ್ರೈವರಿ ಎಂದು ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನಾನು ಹಣ ಕೊಟ್ಟಾಗ ವಾಹನ ಇತ್ತು ಈಗ ಇದೆಯೋ ಇಲ್ಲವೋ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ನೀವು ಮತ್ತು ಆರೋಪಿಯು ಹತ್ತಿರದ ಸಂಬಂಧಿ ಆಗಿದ್ದರಿಂದ ನೀವು ಅವರ ಮನೆಗೆ ಹಾಗೂ ಆರೋಪಿಯು ನಿಮ್ಮ ಮನೆಗೆ ಹೋಗಿ ಬರುವುದನ್ನು ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಯ ಕುಟುಂಬದಲ್ಲಿ ಎಷ್ಟು ಜನ ಇದ್ದಾರೆ ಎಂದರೆ ಸಾಕ್ಷಿ 4 ಜನ ಎಂದು ನುಡಿಯುತ್ತಾರೆ. ಆರೋಪಿಯು ವಿವಾಹವಾಗಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಆರೋಪಿಯು ನಿಮಗೆ ಯಾವ ದಿನಾಂಕದಂದು ಹಾಗೂ ಯಾವ ಸಮಯದಂದು ಹಣ ಕೇಳಿರುತ್ತಾರೆ ಮತುತ ನೀವು ಯಾವಾಗ ಆರೋಪಿಗೆ ಹಣ ಕೊಟ್ಟಿರುತ್ತೀರಿಎಂದರೆ ಸಾಕ್ಷಿ ಆರೋಪಿಯು ಯಾವ ದಿನಾಂಕದಂದು ಕೇಳಿದ್ದರು ಎಂದು ದಿನಾಂಕ ಗೊತ್ತಿರುವುದಿಲ್ಲ ಆದರೆ ನಾನು ದಿನಾಂಕ 11.06.2023 ರಂದು ಹಣ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯು ಹಣವನ್ನು ಕೇಳಿದಾಗ ಯಾರು ಯಾರು ಇದ್ದರು ಎಂದರೆ ಸಾಕ್ಷಿ ಆರೋಪಿ ಮತ್ತು ಅವರ ತಾಯಿ ಬಂದು ಹಣ ಕೇಳಿದ್ದು ಆಗ ನನ್ನ ಪತ್ನಿ ಇದ್ದರು ಎಂದು ನುಡಿಯುತ್ತಾರೆ. ಆರೋಪಿಗೆ ಹಣವನ್ನು ಕೊಟ್ಟಾಗ ಯಾರು ಯಾರು ಇದ್ದರು ಎಂದರೆ ಸಾಕ್ಷಿ ಆರೋಪಿ , ಅವರ ತಾಯಿ ,

ನಾನು ಮತ್ತು ನನ್ನ ಪತ್ನಿ ಮಾತ್ರ ಎಂದು ನುಡಿಯುತ್ತರೆ. ನಿಮ್ಮ ಪತ್ನಿ ಮತ್ತು ಆರೋಪಿಯ ತಾಯಿಯವರ ಸಮಕ್ಷಮ ಆರೋಪಿಗೆ ಹಣ ಕೊಟ್ಟಿರುತ್ತೇನೆ ಎಂದು ದೂರಿನಲ್ಲಿ ಮತ್ತು ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನಿಮ್ಮ ಬಳಿ ಯಾವ ಉದ್ದೇಶಕ್ಕಾಗಿ ರೂ. 15 ಲಕ್ಷ ಹಣವನ್ನು ಪಡೆದುತ್ತಾರೆ ಎಂದರೆ ಸಾಕ್ಷಿ ಸಾಲ ಮಾಡಿಕೊಂಡಿರುತ್ತೇನೆ ಸಾಲ ತೀರಿಸಲು ಬೇಕು ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಯಾವ ವರ್ಷದಲ್ಲಿ ಆರೋಪಿಯ ಅಕ್ಕನವರ ವಿವಾಹ ಆಗಿರುತ್ತದೆ ಎಂದರೆ ಸಾಕ್ಷಿ 2018 ರಲ್ಲಿ ಎಂದು ನುಡಿಯುತ್ತಾರೆ.

ಆರೋಪಿಗೆ ರೂ. 15 ಲಕ್ಷ ಹಣ ಕೊಟ್ಟಿರುತ್ತೇನೆ ಎಂದು ಹೇಳಿದ್ದು ಆ ಸಮಯದಲ್ಲಿ ನಿಮ್ಮ ಬಳಿ ರೂ.15 ಲಕ್ಷ ಹಣ ಇತ್ತು ಎಂದು ತೋರಿಸೇಲು ದಾಖಲೆಯನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ರೂ. 15 ಲಕ್ಷ ಆದಾಯ ಇದೆ ಎಂದು ತೋರಿಸಲು ಏನಾದರೂ ದಾಖಲೆ ಕೊಟ್ಟಿರುತ್ತೀರಾ ಎಂದರೆ ಸಾಷ್ವಿ ಇಲ್ಲ ಎಂದು ನುಡಿಯುತ್ತಾರೆ. ರೂ. 15 ಲಕ್ಷ ಹಣ ಕೊಟ್ಟ ಸಂಬಂಧ ಏನಾದರೂ ಕರಾರುಪತ್ರ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಬೇರೆ ಏನಾದುರಾ ದಾಖಲೆ ಅಂದರೆ ಚೆಕ್ ಮತ್ತು ಆನ್ ಡಿಮ್ಯಾಂಡ್ ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನು ಡಿಯುತ್ತಾರೆ. ರೂ. 15 ಲಕ್ಷ ಹಣವನ್ನು ಚೆಕ್ ಮುಖಾಂತರ ಕೊಡಲು ತೊಂದರೆ ಇತ್ತೆ ಎಂದರೆ ಸಾಕ್ಷಿ ತೊಂದರೆ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸೈಟ್ ಖರೀದಿ ಮಾಡಲು ಹಣ ಇಟ್ಟಿದ್ದರಿಂದ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸೈಟ್ ಖರೀದಿ ಮಾಡಲು ಇಟ್ಟಿದ್ದ ಹಣವನ್ನು ಆರೋಪಿಗೆ ಕೊಟ್ಟಿರುತ್ತೇನೆ ಎಂದು ನಿಮ್ಮ ದೂರಿನಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ವಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ಸ್ಥಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**